
ಹಾಲು ಕ್ಯಾನ್‌ಗಳನ್ನು ತುಂಬಿಕೊಂಡು ಬೆಳಗಾವಿ ಕಡೆ ಹೊರಟಿದ್ದ ಟೆಂಪೋ ಸುರಂಗದೊಳಗೆ ಗುದ್ದಿ, ಮಹಾಂತೇಶ ಕಾಲು ಮುರಿದುಕೊಂಡ ಸುದ್ದಿ ಭೀಮವ್ವಳಿಗೆ ಮುಟ್ಟಿದ್ದು ನಡುರಾತ್ರಿ, ಏನೇ ಬಂದರೂ ಸಹನೆಯಿಂದ ಎದುರಿಸುವ ಕಲೆ ಇವಳಿಗೆ ಹೊಸತೇನಲ್ಲ, ನರಕಕೂಪದಲ್ಲೇ ಬದುಕು ದೂಡಿದವಳು, ಧೃತಿಗೆಡಲಿಲ್ಲ. ಆ ಗಳಿಗೆ ಮನೆ ಬಿಡುವಾಗ ಮಹಾಂತೇಶ ಇವಳೊಂದಿಗೆ ಎಂದಿನಂತೆ ಜಗಳವಾಡುವುದನ್ನು ತಪ್ಪಿಸಿರಲಿಲ್ಲ. ಇವನ ಕುಡಿತದ ವ್ಯಕ್ತಿತ್ವ ಸಾಧಾರಣಮಟ್ಟದಲ್ಲೇನೂ ಇರಲಿಲ್ಲ, ಅಲ್ಲಿ ಇವಳ ಮೈಮೇಲೆ ಹಾದುಬರುತ್ತಿದ್ದ ಗಂಡಸರಿಗಿಂತ ಒಂದು ಕೈ ಮೇಲೆಯೇ ಇತ್ತು. ಇದರ ಕುರಿತಾಗಿಯೇ ಇಬ್ಬರು ಹೊಡೆದಾಡುತ್ತಿದ್ದರು, ಕೈ ಬೆರಳುಗಳನ್ನು ಕಚ್ಚಿಕೊಳ್ಳುವಷ್ಟು ಕ್ರೂರವಾಗಿ. ಕಾಡಿಗೆ ಕಟ್ಟಿಗೆ ತರಲು ಹೋದಾಗಲೆಲ್ಲ ಇವಳನ್ನು ಸಂಶಯಿಸಿ ನೋಡುವುದು ರೂಢಿಗತವಾಗಿಬಿಟ್ಟಿತ್ತು, ಇದೆಲ್ಲದರ ರೇಜಿಗೆಯಲ್ಲೇ, 'ನೀನು ಆಕ್ಸೆಂಟ್ ಆಗಿ ಸಾಯ...' ಎಂದು ಅಂದು ಶಾಪ ಹಾಕಿದ್ದಳು. ಥೂ, ಶಾಪ ನಿಜವಾಗಲು ತುಂಬಾ ಸಮಯವೇನೂ ಹಿಡಿಯಲಿಲ್ಲ. ಮುರಿದ ಕಾಲಿನೊಂದಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಬಿದ್ದಿದ್ದ ಮಹಾಂತೇಶನನ್ನು ನೋಡುತ್ತಲೇ ಅಳತೊಡಗಿದಳು. ಕಾಲು ಮಾತ್ರ ಅಲ್ಲ, ಒಂದು ಕೈ ಸಹ ಊನ ಆಗಿತ್ತು. ಅವನು ಮಾತ್ರ ಇವಳಿಂದಲೇ ಈ ಗಂಡಾಂತರ ಘಟಿಸಿದ್ದು ಎನ್ನುವಂತೆ ಅವಳನ್ನು ನೋಡಲು ಅಸಹ್ಯಿಸಿಕೊಳ್ಳುತ್ತಿದ್ದ. ಮುಂದಿನ ಜೀವನ! ನೆನೆಸಿಕೊಂಡರೆ ಜೀವ ಝಲ್ಲೆನ್ನುತ್ತದೆ, ಹೀಗೆ ಅಂದು ಸಂಜೆ ಕಟ್ಟಿಗೆ ಹೊತ್ತು ತರುತ್ತಿದ್ದಾಗ ಎದುರುಗೊಂಡ ಹತ್ತಿ ಕೊಯ್ಯುವ ಕೂಲಿಯಾಳುಗಳು ಇವಳನ್ನು ಕೂಲಿಗೆ ಕರೆದಿದ್ದರು.

* * *

ಫೆಬ್ರವರಿ – ಮಾರ್ಚ್ ಹೊತ್ತಿಗೆ ಹತ್ತಿ ಫಸಲು ಮೋಡವನ್ನೇ ನಾಚಿಸುವಂತಿತ್ತು. ಮತ್ತೊಂದು ದಿಕ್ಕಿನಿಂದ ಚನ್ನವ್ವಳ ಏರುಸ್ವರದಲ್ಲೇ ಮತ್ತ್ಯಾರೋ ಚೌಡಿಕೆ ಮೇಳ ಬಿತ್ತರಿಸುವ ಸದ್ದು ಕೇಳುತ್ತಿತ್ತು. ಹಕ್ಕಿಪಕ್ಕಿಗಳ ಇಳಿದಾಟ, ಒಂದು ಕ್ರೀಡೆಯಂತೆ. ಗೂಡೆಗೆ ಹತ್ತಿ ತುಂಬಿ ಆಯಾಸವಾದಂತಾಗಿ ಅಲ್ಲೇ ಕುಳಿತುಕೊಂಡಳು. ಈಗ ನಾಲ್ಕು ಪಟ್ಟು ಕೆಲಸ ಹೆಗಲಿಗೆ ಕಚ್ಚಿಕೊಂಡಿತು, ಅವನಿಗೆ ಕುಡಿತಕ್ಕೆ ಮದ್ಯ ತಂದುಕೊಡಬೇಕು, ನಂಜಿಕೊಳ್ಳಲು ಬಾಡು ಉರಿಯಬೇಕು, ಕಕ್ಕಸು ತೊಳೆಯಬೇಕು, ದೈಹಿಕ ಸಂಪರ್ಕಕ್ಕೆ ಸಹಕರಿಸದಿದ್ದರೆ ಸೂಳೆಚಿನಾಲಿ ಎನಿಸಿಕೊಳ್ಳಬೇಕು. ಒಂಟಿಗಾಲಿನಲ್ಲಿ ಹೇಗೆ ಒದೆಯುತ್ತಾನೆಂದರೆ ಎದೆ ಬಗೆದಂತಾಗುತ್ತದೆ. ಒಮ್ಮೊಮ್ಮೆ ಹತ್ತಿರಾಶಿಯೊಳಗೆ ದೀರ್ಘವಾಗಿ ಮಲಗಿಕೊಳ್ಳುವಳು. ಮಾಲೀಕ ವೀರೇಂದ್ರ ಕುಲಕರ್ಣಿಯ ಕಾರು ಬರುವುದು ಕಾಣಿಸಿತು, ಎದ್ದು ಹತ್ತಿ ಬಿಡಿಸಲು ನಡೆದಳು. ಅಲ್ಲಲ್ಲಿ, ದೂರದಲ್ಲಿ ಉಳಿದ ಕೂಲಿಯಾಳುಗಳು ಗಿಡಕ್ಕೆ ಹತ್ತಿಕಾಯಿ ತಗುಲಿಕೊಂಡಂತೆ ಕಾಣುತ್ತಿದ್ದರು. ದೂರದ ಊರುಗಳಿಂದ ಹಾದುಬರುತ್ತಾರೆ, ಟಂಟಂನಲ್ಲಿ, ದೋಣಿಗಳಲ್ಲಿ, ಸನಿಹದ ಊರಿನವರು ಸೈಕಲ್ಲುಗಳಲ್ಲಿ ಬರುತ್ತಾರೆ, ಭೀಮವ್ವಳದ್ದು ಒಂದು ಸೈಕಲ್ಲು ಇದೆಯಲ್ಲ! ಅದು ಮಹಾಂತೇಶ ಹಾಲು ಕ್ಯಾನ್ ಕಟ್ಟಿಕೊಂಡು ಹೊಡೆಯುತ್ತಿದ್ದದ್ದು, ತುಕ್ಕಿಡಿದು ಬಿದ್ದಿದ್ದನ್ನು ಇವಳೇ ಸೈಕಲ್ ಶಾಪಿಗೆ ಕೊಟ್ಟು ರಿಪೇರಿ ಮಾಡಿಸಿಕೊಂಡಿದ್ದು. ಎಂದಿನ ದಿನಕ್ಕಿಂತ ಇವೊತ್ತು ಹದಿನೈದು ಹೆಣ್ಣಾಳುಗಳು ಕೆಲಸಕ್ಕೆ ಗೈರಾಗಿದ್ದದ್ದು ವೀರೇಂದ್ರ ಕುಲಕರ್ಣಿಯ ಸಿಟ್ಟಿಗೆ ಕಾರಣವಾಗಿತ್ತು. ಬರುತ್ತಲೇ ಹತ್ತಿ ತುಂಬಿದ ಗೂಡೆಯನ್ನು ಕಾಲಿನಿಂದ ಜಾಡಿಸಿ ಒದ್ದ, ಭೀಮವ್ವ ತಲ್ಲಣಿಸಿದಳು, ಉಳಿದವರೂ... ಆ ಹದಿನೈದು ಹೆಣ್ಣಾಳುಗಳಲ್ಲಿ ಕೆಲವರು ಆರೇಳು ತಿಂಗಳ ಗರ್ಭಿಣಿಯರಾಗಿದ್ದರೆ ಉಳಿದವರು ಈಗಲೋ ಆಗಲೋ ಮಕ್ಕಳನ್ನು ಹೆರುವಂತಿದ್ದರು. ಇತ್ತ ಬಾಂಬೆಗೆ ಹತ್ತಿ ಲೋಡು ರಫ್ತು ಮಾಡಬೇಕು, ಅವರು ಕೇಳಿದಷ್ಟು ಕಳಿಸಿಕೊಡಲಾಗುತ್ತಿಲ್ಲ. ಪಾಕಿಸ್ತಾನಕ್ಕೂ ಇಲ್ಲಿಂದ ಕಳಿಸಿಕೊಡಲಾಗುತ್ತದೆ. ಭೀಮವ್ವ ಆರು ತಿಂಗಳ ಗರ್ಭಿಣಿಯಾದರೂ ಕೆಲಸಕ್ಕೆ ಬಂದಿದ್ದಳು ಮತ್ತು ಅವಳು ಬರಲೇಬೇಕಿತ್ತು.



ಚನ್ನವ್ವಳಿಂದ ಚೌಡಿಕೆ ಕಲಿಯಬೇಕಿತ್ತು, ಯಾಕೋ ಇವಳ ಆತ್ಮಕ್ಕೆ ಅದು ಒದಗಲೇ ಇಲ್ಲ. ಅದೊಂದು ಹಳಹಳಿಕೆ ಈಗೀಗ ತೀವ್ರವಾಗತೊಡಗಿದೆ, ಇವಳಲ್ಲಿ. ಜಗದ ಸೃಷ್ಟಿಯ ಭಾರವನ್ನೊತ್ತ ಟೆಂಪೋ ಗುಡ್ಡಗಾಡಿನಲ್ಲಿ